ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

CC 1999/2024 ಪಿಡಬ್ಲ್ಯೂ-1

ದಿನಾಂಕಃ- 13-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ. ವಕೀಲರಿಂದಃ-**

ಆರೋಪಿ ನನ್ನ ಸಂಬಂಧಿಕರಾಗಿರುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ 4 ವರೆ ಎಕರೆ ಜಮೀನು ಇದೆ. ನನ್ನ ಹೆಸರಿನಲ್ಲಿ 1 ಎಕರೆ ಜಮೀನು ಇದೆ, ಉಳಿದ ಜಮೀನು ನನ್ನ ತಂದೆ ಹೆಸರಿನಲ್ಲಿ ಇದೆ. ಸದರಿ ಜಮೀನಿನಲ್ಲಿ ಕಬ್ಬು, ತೆಂಗು ಬೆಳೆಯುತ್ತೇನೆ. ಮನೆಯ ವ್ಯವಹಾರವನ್ನು ನಾನು, ನನ್ನ ತಂದೆ ಇಬ್ಬರು ನೋಡಿಕೊಳ್ಳುತ್ತೇನೆ. ಬ್ಯಾಂಕ್ ಆಫ್ ಬರೋಡಾದಲ್ಲಿ ನನ್ನ ಖಾತೆ ಇದೆ. ಆರೋಪಿ ಮತ್ತು ಅವರ ಗಂಡ ಬಂದು ಹಣ ಕೇಳಿರುತ್ತಾರೆ. ಮನೆಯ ವ್ಯವಹಾರಕ್ಕೆ ಹಣ ಬೇಕು ಎಂದು ಕೇಳಿರುತ್ತಾರೆ. ಫೆಬ್ರವರಿ 2024 ರಲ್ಲಿ ಆರೋಪಿ ನನ್ನನ್ನು ಹಣ ಕೇಳಿರುತ್ತಾರೆ. ಆಗ ನಾನು 10 ದಿನಗಳ ಸಮಯ ಕೇಳಿರುತ್ತೇನೆ. ನಾನು ದಿ 10-03-2024 ರಂದು ಹಣ ಕೊಟ್ಟಿರುತ್ತೇನೆ. ನಾನು ನಗದು ರೂಪದಲ್ಲಿ ಹಣ ಕೊಟ್ಟಿರುತ್ತೇನೆ. ಹಣದ ಭದ್ರತೆಗಾಗಿ ಚೆಕ್ ಪಡೆದಿರುತ್ತೇನೆ. ನಾನು ಬಿಪಿಎಲ್ ಕಾರ್ಡ್ ಹೊಂದಿರುತ್ತೇನೆ. ಕಬ್ಬು, ತೆಂಗು ಬೆಳೆದು ಹಣವನ್ನು ಕೂಡಿ ಇಟ್ಟುಕೊಂಡಿದ್ದೆ ಎನ್ನುತ್ತಾರೆ, ಆ ಬಗ್ಗೆ ಯಾವುದೇ ದಾಖಲೆ ಇಲ್ಲ. ಆರೋಪಿಯ ಮನೆಯವರು ನನಗೆ ಪರಿಚಯ ಇದ್ದಾರೆ. ನಂತರದಲ್ಲಿ ಆರೋಪಿಯ ಮನೆಯವರಿಗೆ ವಿಚಾರ ತಿಳಿಸಿರುತ್ತೇನೆ. ಆಗ ಆರೋಪಿಯ ಮನೆಯವರು ಹಣ ಕೊಡುವಂತೆ ತಿಳಿಸಿರುತ್ತಾರೆ, ಅವರ ಹೆಸರು ಗೊತ್ತಿಲ್ಲ. ಆರೋಪಿಗೆ ನಾನು ಯಾವುದೇ ಹಣ ಕೊಟ್ಟಿಲ್ಲ, ಚೀಟಿ ವ್ಯವಹಾರದಲ್ಲಿ ನೀಡಿದ ಚೆಕ್ ನ್ನು ದುರುಪಯೋಗಪಡಿಸಿಕೊಂಡಿದ್ದೇನೆಂದರೆ ಸರಿಯಲ್ಲ. ಚೆಕ್ ಬಿಟ್ಟು ಬೇರೆ ದಾಖಲೆ ಕೊಟ್ಟಿಲ್ಲ.

ಆರೋಪಿಗೆ ಬ್ಯಾಂಕ್ ಗೆ ಚೆಕ್ ನ್ನು ಹಾಜರುಪಡಿಸುವ ಬಗ್ಗೆ ಹೇಳಿಲ್ಲ. ಆರೋಪಿಯು ಚೀಟಿ ವ್ಯವಹಾರದಲ್ಲಿ ನೀಡಿದ ಚೆಕ್ ನ್ನು ದುರುಪಯೋಗಪಡಿಸಿಕೊಂಡು ಬ್ಯಾಂಕ್ ಗೆ ದಾಖಲಿಸಿದ್ದೆನೆಂದರೆ ಸರಿಯಲ್ಲ. ಆರೋಪಿಯು ನನ್ನ ಮುಂದೆಯೇ ಚೆಕ್ ಗೆ ಸಹಿ ಮಾಡಿ ಕೊಟ್ಟಿರುತ್ತಾರೆ. ಚೆಕ್ ನಲ್ಲಿರುವ ಬರವಣಿಗೆ ಮತ್ತು ಚೆಕ್ ನಲ್ಲಿರುವ ಒಕ್ಕಣೆಯನ್ನು ನಾನೇ ಬರೆದುಕೊಂಡಿದ್ದೇನೆಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮವಾಗಿ ಹಣವನ್ನು ಪಡೆಯುವ ಉದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ